# ಕರ್ನಾಟಕ ಸರ್ಕಾರ

NULM

ಸಂಖ್ಯೆ: PDS/10/MED/2020

ಕರ್ನಾಟಕ ಸರ್ಕಾರದ ಸಚಿವಾಲಯ,
ಜನಶಕ್ತಿ ಮತ್ತು ಉದ್ಯೋಗ ವಿಭಾಗ, ಯೋಜನಾ ಇಲಾಖೆ,
7ನೇ ಮಹಡಿ, 3ನೇ ಹಂತ ,ಬಹುಮಹಡಿ ಕಟ್ಟಡ,
ಬೆಂಗಳೂರು,ದಿನಾಂಕ:11.08.2020.
ದೂರವಾಣಿ ಸಂಖ್ಯೆ:22032184

ಇವರಿಗೆ,
ಆಡಳಿತಾಧಿಕಾರಿ,
ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001

ಮಾನ್ಯರೇ,

ವಿಷಯ: ಮೌಲ್ಯಮಾಪನ ಅಧ್ಯಯನಗಳ ಶಿಪಾರಸ್ಸುಗಳ ಮೇಲೆ ಕ್ರಮ ಕೈಗೊಂಡ ವರದಿಗಳ ಕುರಿತು.

ಉಲ್ಲೇಖ:
1. ಮುಖ್ಯ ಮೌಲ್ಯಮಾಪನಾಧಿಕಾರಿಗಳು, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ, ಇವರ ಪತ್ರ ಸಂಖ್ಯೆ: ಕೆಇಎ/ 51/ ಎಟಿಆರ್ /ಕೌ.ತ.ಜೀ/ 2019, ದಿನಾಂಕ:20.05.2020.
2. ಆಡಳಿತಾಧಿಕಾರಿ, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ, ಇವರ ಪತ್ರ ಸಂಖ್ಯೆ: ಕೆಇಎ 51 ಎಟಿಆರ್ 2019, ದಿನಾಂಕ:26.06.2020.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರಗಳಲ್ಲಿ ಕೋರಿರುವಂತೆ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಲ್ಲಿ ಮೌಲ್ಯಮಾಪನ ಅಧ್ಯಯನಗಳ ಶಿಫಾರಸ್ಸುಗಳ ಮೇಲೆ ಕೈಗೊಂಡಿರುವ ಕ್ರಮಗಳ ಕುರಿತು ಇಲಾಖೆಯಿಂದ ಸ್ವೀಕೃತವಾಗಿರುವ ಮಾಹಿತಿ (Action Taken Report) ಯನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲಾಗಿದೆ.

ತಮ್ಮ ವಿಶ್ವಾಸಿ

(ಕೆ.ಗುರುರಾಜರಾವ್)
ನಿರ್ದೇಶಕರು(ಪ್ರಭಾರ),
ಜನಶಕ್ತಿ ಮತ್ತು ಉದ್ಯೋಗ ವಿಭಾಗ,
ಯೋಜನಾ ಇಲಾಖೆ.

Office Letter-2

735660/2019/SEC-R&I-SDEL

ಅನಿ ಆಲು&ಜೇ 12965 ಡೇ-ನಲ್ಮ್ 2019-20 ದಿನಾಂಕ: .09.2019

ಡೇ-ನಲ್ಮ್ ಯೋಜನೆಯ ಕೌಶಲ್ಯ ತರಬೇತಿ ಮೂಲಕ ಉದ್ಯೋಗ ಮತ್ತು ಸ್ಥಳ ನಿಯುಕ್ತಿ ಉಪಘಟಕದಡಿ ಕೈಗೊಂಡ ತರಬೇತಿ ಕಾರ್ಯಕ್ರಮದ ಮೌಲ್ಯಮಾಪನದ ಅಧ್ಯಯನದ ಬಗ್ಗೆ ಅನುಪಾಲನಾ ವರದಿ.

| ಕ್ರ ಸಂ | ಪ್ರಮುಖ ಶಿಫಾರಸು | ಸ್ಪಷ್ಟೀಕರಣ |
|---|---|---|
| 1 | ನಗರ ಬಡವರೆಂದು ಯಾರನ್ನು ಪರಿಗಣಿಸಬೇಕು ಮತ್ತು ಅರ್ಹತಾ ಮಾನದಂಡಗಳು ಯಾವುವು ಎಂಬುದರ ಬಗ್ಗೆ ಯಾವುದೇ ನಿರ್ದಿಷ್ಟ ಸೂಚನೆಯಿಲ್ಲ. ನಗರ ಬಡವರನ್ನು ಗುರುತಿಸಲು ಇಲಾಖೆಯು ಸೂಕ್ತ ಆದಾಯ ಮಾನದಂಡವನ್ನು ನಿಗದಿ ಮಾಡಬೇಕಾಗಿದೆ. | • ಪ್ರಸ್ತುತ ಡೇ-ನಲ್ಮ್ ಯೋಜನೆಯನ್ನು ಅನುಷ್ಠಾನಗೊಳಿಸಲು ಈ ಕೆಳಕಂಡ ಮಾನದಂಡವನ್ನು ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಅನುಸರಿಸಲಾಗುತ್ತಿದೆ.<br>**"The primary target of DAY-NULM is the urban poor, including the urban homeless. The finalisation of Socio-economic and Caste Census (SECC), 2011 for identification of urban poor is currently under progress. Accordingly, as an interim measure, the target of DAY-NULM will be the urban population identified presently as below poverty line population in urban areas by the States/UTs. The coverage may be broadened to include families of disadvantaged groups like SCs, STs, women, minorities, disabled etc. subject to a maximum of 25 percent of the above urban poor population".**<br>• ಪ್ರಸ್ತುತ, ರಾಜ್ಯದಲ್ಲಿ ಬಡತನ ರೇಖೆಗಿಂತ ಕೆಳಗಿರುವ ಎಂಬ ಮಾನದಂಡವನ್ನು ಅನುಸರಿಸುವ ಮೂಲಕ ನಗರ ಪ್ರದೇಶದ ಫಲಾನುಭವಿಗಳನ್ನು ಗುರುತಿಸಿ ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿರುತ್ತದೆ.<br>• ಮೌಲ್ಯ ಮಾಪನ ಪ್ರಾಧಿಕಾರದ ಶಿಫಾರಸ್ಸಿನಂತೆ ಡೇ-ನಲ್ಮ್ ಯೋಜನೆಯಡಿ ನಗರದ ಬಡವರನ್ನು ಗುರುತಿಸಲು ಸೂಕ್ತ ಆದಾಯ ಮಾನದಂಡವನ್ನು ನಿಗದಿಪಡಿಸುವಂತೆ ಕೋರಿ ಸರ್ಕಾರಕ್ಕೆ ದಿನಾಂಕ:30.05.2019 ರಂದು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ.<br>ಅದರಂತೆ ಸರ್ಕಾರದ ಆದೇಶ ಸಂ:ಕೌಉಜೀಇ 82 ಉಜೀಇ ದಿ:19.06.2019 ರಲ್ಲಿ ಡೇ-ನಲ್ಮ್ ಯೋಜನೆಯ ಅನುಷ್ಠಾನಕ್ಕಾಗಿ ಫಲಾನುಭವಿಗಳನ್ನು ಗುರುತಿಸಲು ಆದಾಯ ಮಿತಿಯನ್ನು ರೂ.1.20 ಲಕ್ಷಗಳಿಗೆ ನಿಗಧಿಪಡಿಸಿ ಆದೇಶಿಸಲಾಗಿರುತ್ತದೆ. |

| | | |
|---|---|---|
| 2 | ಗರಿಷ್ಠ ವಯಸ್ಸಿನ ಮಿತಿಯನ್ನು ಸಡಿಲಿಸಿ ಪ್ರಸ್ತುತ ಇರುವ 35 ವರ್ಷಗಳಿಂದ 45 ವರ್ಷಗಳವರೆಗೆ ಹೆಚ್ಚಿಸಬೇಕು. 35-45 ವರ್ಷ ವಯಸ್ಸಿನವರೆಗೆ, ವಿಶೇಷವಾಗಿ ನಗರ ಮಹಿಳೆಯರಿಗೆ ಕೌಶಲ್ಯ ಪಡೆಯಲು ಸಾಮರ್ಥ್ಯವಿದ್ದು, ಅದು ಅವರಿಗೆ ಆರ್ಥಿಕ ಸಬಲೀಕರಣವನ್ನು ಪಡೆಯಲು ಸಹಾಯ ಮಾಡುತ್ತದೆ. | ಫಲಾನುಭವಿಗಳ ವಯಸ್ಸಿನ ಗರಿಷ್ಠ ಮಿತಿಯನ್ನು 16 ರಿಂದ 45 ವಯಸ್ಸಿನವರೆಗೆ ನಿಗದಿಪಡಿಸಿ ಅನುಷ್ಠಾನಗೊಳಿಸಲು ಕ್ರಮವಹಿಸಲಾಗಿದೆ.<br>ಈ ಕಾರ್ಯಾಲಯದ ಪತ್ರ ಸಂ: ಅನಿ ಆಉ&ಜೀಇ 207 ಡೇ-ನಲ್ಮ್ 2019-20 ದಿ:24.06.2019ರ ಪತ್ರದಲ್ಲಿ ಡೇ-ನಲ್ಮ್ ಯೋಜನೆಯ ಕೌಶಲ್ಯ ತರಬೇತಿ ಮೂಲಕ ಉದ್ಯೋಗ ಮತ್ತು ಸ್ಥಳ ನಿಯುಕ್ತಿ ಉಪಘಟಕದಡಿ ತರಬೇತಿಯನ್ನು ಪಡೆದುಕೊಳ್ಳುವ ಫಲಾನುಭವಿಯ ವಯೋಮಿತಿಯನ್ನು ಕನಿಷ್ಟ 16 ವರ್ಷ ಹಾಗೂ ಗರಿಷ್ಟ 45 ವರ್ಷ ಎಂದು ನಿಗದಿಪಡಿಸಿ ಅದರಂತೆ ಅನುಷ್ಠಾನಗೊಳಿಸಲು ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಿಗೆ ತಿಳಿಸಲಾಗಿರುತ್ತದೆ. |
| 3 | ತರಬೇತಿ ಕಾರ್ಯಕ್ರಮದ ಕೊನೆಯ ದಿನದಂದು ಮೂರನೇ ಪಕ್ಷದಿಂದ ಮೌಲ್ಯಮಾಪನ ಮಾಡುವಂತೆ ಪೌರಾಡಳಿತ ನಿರ್ದೇಶನಾಲಯವು ಕಾರ್ಯವಿಧಾನವನ್ನು ಅಳವಡಿಸಬೇಕು. ಅಗತ್ಯವಿದ್ದರೆ ನಿರ್ದೇಶನಾಲಯವರು ಮೂರನೇ ಪಕ್ಷದ ಮೌಲ್ಯಮಾಪನಕ್ಕಾಗಿ ಇತರ ಸೂಕ್ತ ಸಂಸ್ಥೆಗಳನ್ನು ಸೇರ್ಪಡೆ ಮಾಡಬಹುದು. | • ಸದರಿ ಅಂಶಕ್ಕೆ ಸಂಬಂಧಿಸಿದಂತೆ, 2014-15, 2015-16 ಮತ್ತು 2016-17ನೇ ಸಾಲಿನಲ್ಲಿ ಬಾಕಿ ಉಳಿದಿರುವ ಫಲಾನುಭವಿಗಳ ಪ್ರಮಾಣೀಕರಣ ಮತ್ತು ಮೌಲ್ಯಮಾಪನವನ್ನು ಮಾಡಲು ಈಗಾಗಲೇ Industrial association and Assessing body ಗಳನ್ನು ತೊಡಗಿಸಿಕೊಂಡು ಪ್ರಮಾಣೀಕರಣ ಮತ್ತು ಮೌಲ್ಯಮಾಪನವನ್ನು ಮಾಡಲು ಅಗತ್ಯ ಕ್ರಮವನ್ನು ಕೈಗೊಳ್ಳಲಾಗಿರುತ್ತದೆ.<br>• ಮುಂದುವರೆದು, ದಿನಾಂಕ:01.04.2019 ರಿಂದ ಪ್ರಾರಂಭವಾಗಿರುವ ಎಲ್ಲಾ ತರಬೇತಿ ಕಾರ್ಯಕ್ರಮಗಳಿಗೆ ಎನ್.ಎಸ್.ಡಿ.ಸಿ ಮಾನ್ಯತೆ ಹೊಂದಿರುವ ಸಂಸ್ಥೆಗಳಿಂದ ಪ್ರಮಾಣೀಕರಣ ಮತ್ತು ಮೌಲ್ಯಮಾಪನವನ್ನು ಮಾಡುವ ಬಗ್ಗೆ ಕೇಂದ್ರೀಕೃತ (Centralized) ವಾಗಿಯೇ ಅಗತ್ಯ ಕ್ರಮವನ್ನು ಕೈಗೊಳ್ಳುವುದಾಗಿ ನಿರ್ದೇಶಕರು, ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಮಂತ್ರಾಲಯ, ಭಾರತ ಸರ್ಕಾರ, ನವದೆಹಲಿ ರವರ ಪತ್ರ ಸಂ: K-13/8/2017-UPA (EFS:3145135) Dated:03.04.2019 ರಲ್ಲಿ ತಿಳಿಸಿರುವ ಮೇರೆಗೆ ಅದರಂತೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು. |
| 4 | ಕೌಶಲ್ಯ ತರಬೇತಿ ಒದಗಿಸುವವರ ಹಣಕಾಸನ್ನು ಇತ್ಯರ್ಥಪಡಿಸುವಲ್ಲಿ ಅಗಾಧ ವಿಳಂಬವಿದೆ. ಹಣಕಾಸಿನ ಇತ್ಯರ್ಥಪಡಿಸುವ ಸಂಪೂರ್ಣ ಪ್ರಕ್ರಿಯೆಯನ್ನು ಪರಿಷ್ಕರಿಸಬೇಕು ಮತ್ತು ಇದರಲ್ಲಿನ ಅನಗತ್ಯ ವಿಳಂಬವನ್ನು ಮೊಟಕುಗೊಳಿಸಬಹುದು. ಈ ನಿಟ್ಟಿನಲ್ಲಿ ಅಧಿಕಾರ ನಿಯೋಜನೆಯ ಯೋಜನೆಯಡಿಯಲ್ಲಿ ಸುಧಾರಿತ ಸೇವಾ ವಿತರಣೆಯನ್ನು ಸುಲಭಗೊಳಿಸುತ್ತದೆ. | ಸದರಿ ಅಂಶಕ್ಕೆ ಸಂಬಂಧಿಸಿದಂತೆ, ತರಬೇತಿ ಕೇಂದ್ರಗಳಿಗೆ ಒಡಂಬಡಿಕೆಯಂತೆ ನೇರವಾಗಿ ಅನುದಾನವನ್ನು ಬಿಡುಗಡೆ ಮಾಡುವಂತೆ ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆಗಳಿಗೆ ಸೂಚಿಸಲಾಗಿರುತ್ತದೆ. ಹಾಗೂ ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ Public Financ Management System (PFMS) ವ್ಯವಸ್ಥೆಯನ್ನು ಡೇ-ನಲ್ಮ್ ಯೋಜನೆಯ ಅಳವಡಿಸಿಕೊಂಡು ಅದರಂತೆ ತರಬೇತಿ ಕೇಂದ್ರಗಳಿಗೆ ನೇರವಾಗಿ ಅನುದಾನವನ್ನು ಬಿಡು ಮಾಡಲು ಕ್ರಮ ಕೈಗೊಳ್ಳಲು ಕೆನರಾ ಬ್ಯಾಂಕಿನೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದ್ದು, ಅನು[illegible] ಪ್ರಕ್ರಿಯೆಯು ಅಂತಿಮ ಹಂತದಲ್ಲಿರುತ್ತದೆ. |

| | | |
|---|---|---|
| 5 | ಕೌಶಲ್ಯ ತರಬೇತಿ ಒದಗಿಸುವವರು ತರಬೇತಿ ಅಭ್ಯರ್ಥಿಗಳ ಸರಿಯಾದ ಜಾಡುಪಟ್ಟಿಯ ಯಾಂತ್ರಿಕ ವ್ಯವಸ್ಥೆಯನ್ನು ಹೊಂದಿರುವುದನ್ನು ಪೌರಾಡಳಿತ ನಿರ್ದೇಶನಾಲಯವು ಖಚಿತಪಡಿಸಿಕೊಳ್ಳಬೇಕು. ಎಲ್ಲಾ ಯಶಸ್ವಿ ಅಭ್ಯರ್ಥಿಗಳಿಗೆ ಕೌಶಲ್ಯ ತರಬೇತಿ ಒದಗಿಸುವವರು ಉದ್ಯೋಗ ಒದಗಿಸುವುದಕ್ಕಾಗಿ ಅಥವಾ ಸ್ವ ಉದ್ಯಮವನ್ನು ಸ್ಥಾಪಿಸಿಕೊಳ್ಳುವಂತೆ ಕಾರ್ಯ ನಿರ್ವಹಿಸಬೇಕು. | ಸದರಿ ಅಂಶಕ್ಕೆ ಸಂಬಂಧಿಸಿದಂತೆ,<br>• 2018-19ನೇ ಸಾಲಿನಿಂದ ತರಬೇತಿ ಕೇಂದ್ರಗಳಿಗೆ ಕಾರ್ಯಾದೇಶವನ್ನು ನೀಡುವ ಪೂರ್ವದಲ್ಲಿ ಸಂಬಂಧಪಟ್ಟ ತರಬೇತಿ ಸಂಸ್ಥೆಗಳು ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಹೊಂದಿರುವ ಬಗ್ಗೆ ಖಾತ್ರಿ ಮತ್ತು ದೃಢೀಕರಿಸಿಕೊಂಡು ತರಬೇತಿಯನ್ನು ಆಯೋಜಿಸಲು ಅಗತ್ಯ ಕ್ರಮ ಕೈಗೊಳ್ಳಲಾಗಿರುತ್ತದೆ.<br>• ಮೂಲಭೂತ ಸೌಲಭ್ಯಗಳಿಗನುಗುಣವಾಗಿ ಕೌಶಲ್‌ಕರ್‌ನಲ್ಲಿ ಅಕ್ರಿಡೇಷನ್ ಆಗಿರುವ ತರಬೇತಿ ಕೇಂದ್ರಗಳನ್ನು ಮಾತ್ರ ತೊಡಗಿಸಿಕೊಳ್ಳಲಾಗುತ್ತಿದೆ.<br>• ತರಬೇತಿ ಕೇಂದ್ರಗಳೊಂದಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳುವಾಗ ಮಾರ್ಗಸೂಚಿಯಂತೆ ತರಬೇತಿಯನ್ನು ಪಡೆದುಕೊಂಡಿರುವ ಶೇ.70 ರಷ್ಟು ಅಭ್ಯರ್ಥಿಗಳಿಗೆ ತರಬೇತಿಯು ಪೂರ್ಣಗೊಂಡ 3 ತಿಂಗಳೊಳಗಾಗಿ ಉದ್ಯೋಗವಕಾಶವನ್ನು ಕಲ್ಪಿಸುವುದು ಕಡ್ಡಾಯವೆಂದು ಸೂಚಿಸಲಾಗಿರುತ್ತದೆ. ಹಾಗೂ ತರಬೇತಿಯನ್ನು ಪಡೆದುಕೊಂಡ ಅಭ್ಯರ್ಥಿಗಳು ಸ್ವ ಉದ್ಯೋಗ ಕೈಗೊಳ್ಳಲು ಇಚ್ಛಿಸಿದಲ್ಲಿ ಸದರಿ ಯೋಜನೆಯ ಸ್ವಯಂ ಉದ್ಯೋಗ ಕಾರ್ಯಕ್ರಮದ ಉಪಘಟಕದ ನೆರವನ್ನು ಪಡೆದುಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.<br>• ಮುಂದುವರೆದು, ಯಾವ ಸಂಸ್ಥೆಯು ಮಾರ್ಗಸೂಚಿಯಂತೆ ಉದ್ಯೋಗವಕಾಶವನ್ನು ಕಲ್ಪಿಸುವುದಿಲ್ಲವೋ ಅಂತಹ ಸಂಸ್ಥೆಗೆ 3ನೇ ಕಂತಿನ ಶೇ.20 ರಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗುವುದಿಲ್ಲ. |
| 6 | ಪೌರಾಡಳಿತ ನಿರ್ದೇಶನಾಲಯವು ಎಲ್ಲಾ ಯಶಸ್ವಿ ಆದರೆ ನಿರುದ್ಯೋಗಿಗಳ ವ್ಯಕ್ತಿಗತ ದತ್ತ ಸಂಚಯ, ಕೌಶಲ್ಯದ ಮಾಹಿತಿಯನ್ನು ಸೂಚಿಸುವ ಸಾರ್ವಜನಿಕ ಅರಿನೆಲೆಯಲ್ಲಿ ಇರಿಸಲ್ಪಡುವಂತೆ ಸೂಕ್ತವಾದ ವೆಬ್ ಪೋರ್ಟಲ್ ವಿನ್ಯಾಸಗೊಳಿಸಲ್ಪಟ್ಟಿದೆ ಎಂದು ಖಾತರಿ ಪಡಿಸಿಕೊಳ್ಳಬೇಕು. ಇದು ಭವಿಷ್ಯದ ಉದ್ಯೋಗದಾತರಿಗೆ ಖಾಸಗಿ/ಸಾರ್ವಜನಿಕ ವಲಯದಲ್ಲಿನ ವೈಯಕ್ತಿಕ ಉದ್ಯಮಿಗಳು ತಮ್ಮ ಅವಶ್ಯಕತೆಗನುಗುಣವಾಗಿ ಪರಿಣಿತ ಅಭ್ಯರ್ಥಿಗಳ ಕೂಟದಿಂದ ಪಡೆಯಲು ಸಹಾಯ ಮಾಡುತ್ತದೆ. | • ಸದರಿ ಅಂಶಕ್ಕೆ ಸಂಬಂಧಿಸಿದಂತೆ, ಯೋಜನೆಯಡಿ ತರಬೇತಿಯನ್ನು ಪಡೆದುಕೊಂಡ ಎಲ್ಲಾ ಫಲಾನುಭವಿಗಳ ಮಾಹಿತಿಯನ್ನು ಬ್ಯಾಚ್‌ವಾರು ಮತ್ತು ತರಬೇತಿ ವಿಷಯವಾರು ಡೇ-ನಲ್ಮ್ ಯೋಜನೆಯ ವೆಬ್‌ಪೋರ್ಟಲ್‌ನಲ್ಲಿ ಕಾಲೋಚಿತಗೊಳಿಸುವುದು ಕಡ್ಡಾಯವಾಗಿರುತ್ತದೆ ಅದರಂತೆ ವೆಬ್‌ಪೋರ್ಟಲ್‌ನಲ್ಲಿ ಮಾಹಿತಿಯನ್ನು ವಿನ್ಯಾಸಗೊಳಿಸಲ್ಪಟ್ಟಿರುತ್ತದೆ.<br>• ಮುಂದುವರೆದು, ರಾಜ್ಯದಲ್ಲಿ ಡೇ-ನಲ್ಮ್ ಯೋಜನೆಗೆ ಪ್ರತ್ಯೇಕವಾಗಿ ವೆಬ್‌ಸೈಟ್‌ನ್ನು ಸೃಜಿಸಲು ಸರ್ಕಾರವು ಅನುಮೋದನೆಯನ್ನು ನೀಡಿದ್ದು, ವೆಬ್‌ಸೈಟ್‌ನ್ನು ಸೃಜಿಸುವ ಕಾರ್ಯವು ಪ್ರಕ್ರಿಯೆಯಲ್ಲಿದ್ದು, ಉದ್ಯೋಗದಾತರಿಗೆ ಖಾಸಗಿ/ಸಾರ್ವಜನಿಕ ವಲಯದಲ್ಲಿನ ವೈಯಕ್ತಿಕ ಉದ್ಯಮಿಗಳು ತಮ್ಮ ಅವಶ್ಯಕತೆಗನುಗುಣವಾಗಿ ಪರಿಣಿತ ಅಭ್ಯರ್ಥಿಗಳ ಕೂಟದಿಂದ ಪಡೆದುಕೊಳ್ಳುವ ಅಂಶವನ್ನು ಹೊಸ ವೆಬ್‌ಸೈಟ್‌ನಲ್ಲಿ ಅಳವಡಿಸಿಕೊಳ್ಳಲಾಗುವುದು.<br>• ರಾಜ್ಯ ಸರ್ಕಾರದ koushalkar.com ನಲ್ಲಿ ನಿರುದ್ಯೋಗಿಗಳ / ತರಬೇತಿಗೆ ಇಚ್ಛಿಸುವ ಅಭ್ಯರ್ಥಿಗಳ ಮಾಹಿತಿಯು ಈಗಾಗಲೇ ಲಭ್ಯವಿರುತ್ತದೆ. |

| | | |
|---|---|---|
| 7 | ತಮ್ಮ ಕೌಶಲ್ಯವನ್ನು ಸುಧಾರಿಸಲು ಅಭ್ಯರ್ಥಿಗೆ ಅನುಕೂಲವಾಗುವಂತೆ ಎಲ್ಲಾ ಕೌಶಲ್ಯ ಪಠ್ಯಕ್ರಮಗಳಲ್ಲಿ ಮೃದು ಕೌಶಲ್ಯ ತರಬೇತಿಯನ್ನು ಸೇರಿಸಬೇಕಾಗಿದೆ. ಮೃದು ಕೌಶಲ್ಯ ತರಬೇತಿಯು ಮೂಲಭೂತ ಕೌಶಲ್ಯಗಳನ್ನು (ಆಂಗ್ಲ ಮತ್ತು ಕನ್ನಡ ಭಾಷೆಯಲ್ಲಿ) ಬರೆಯುವುದರ ಬಗ್ಗೆ. ಬೇಸಿಕ್ ಕಂಪ್ಯೂಟರ್ ಕಾರ್ಯಾಚರಣೆಗಳು (ಕಂಪ್ಯೂಟರ್ ತರಬೇತಿ ಹೊರತುಪಡಿಸಿ ಕೋರ್ಸ್‌ಗಳಿಗಾಗಿ), ವೃತ್ತಿಪರ ಶಿಷ್ಟಾಚಾರಗಳು, ವ್ಯಕ್ತಿತ್ವ ಅಭಿವೃದ್ಧಿ ಮತ್ತು ಆರ್ಥಿಕ ಸಾಕ್ಷರತೆ, ಕೋರ್ಸ್ ಮಾಡ್ಯೂಲ್‌ನಲ್ಲಿ ಸೇರಿಸುವುದು ಸೂಕ್ತ ಎನಿಸುತ್ತದೆ. ಮೃದು ಕೌಶಲ್ಯ ತರಬೇತಿಯು ಶೈಕ್ಷಣಿಕ ಸಾಧನೆಗಳನ್ನು (ಸಿ.ವಿ) ಹೇಗೆ ಬರೆಯುವುದು ಎಂಬುದರ ಬಗ್ಗೆ ಒಂದು ಅಧಿವೇಶನವನ್ನು ಸಹಾ ಒಳಗೊಂಡಿರಬಹುದು. | ಸದರಿ ಅಂಶಕ್ಕೆ ಸಂಬಂಧಿಸಿದಂತೆ, ಡೇ-ನಲ್ಮ್ ಯೋಜನೆಯಡಿ ತರಬೇತಿಯನ್ನು ಪಡೆದುಕೋ ಎಲ್ಲಾ ಫಲಾನುಭವಿಗಳಿಗೆ ಕೇಂದ್ರ ಸರ್ಕಾರದ ಮಾನದಂಡದಂತೆ NSQF ನಲ್ಲಿ ಲಭ್ಯವಿರುವ 40 ಗಂಟೆಗಳ ಕಾಲ ಉದ್ಯಮಶೀಲತೆ ಅಭಿವೃದ್ಧಿ ಕಾರ್ಯಕ್ರಮ ಹಾಗೂ 20 ಗಂಟೆಗಳ ಕ ಡಿಜಿಟಲ್ ಲಿಟ್ರಸಿ ಕಾರ್ಯಕ್ರಮಗಳ ಕುರಿತು ತರಬೇತಿಯನ್ನು ನೀಡುವುದನ್ನು ಕಡ್ಡಾಯಗೊ ಆದೇಶಿಸಲಾಗಿರುತ್ತದೆ. ಸದರಿ ಕಾರ್ಯಕ್ರಮದಡಿ ಸದರಿಯವರು ಸೂಚಿಸಿರುವ ವೃತ್ತಿ ಶಿಷ್ಟಾಚಾರಗಳು, ವ್ಯಕ್ತಿತ್ವ ಅಭಿವೃದ್ಧಿ ಮತ್ತು ಆರ್ಥಿಕ ಸಾಕ್ಷರತೆ ಬಗ್ಗೆ ತರಬೇತಿಯ ನೀಡಲಾಗುತ್ತಿದೆ. |
| 8 | ಕೌಶಲ್ಯ ತರಬೇತಿ ಒದಗಿಸುವವರು ತರಬೇತುದಾರರಿಗೆ ಸರಿಯಾದ ಆಹಾರ ಮತ್ತು ವಸತಿಯನ್ನು ಒದಗಿಸುವುದನ್ನು ಪೌರಾಡಳಿತ ನಿರ್ದೇಶನಾಲಯವು ಖಚಿತಪಡಿಸುವುದು. | ಸದರಿ ಅಂಶಕ್ಕೆ ಸಂಬಂಧಿಸಿದಂತೆ, 2014-15ನೇ ಸಾಲಿನಲ್ಲಿ ಸಿಪೆಟ್ ಸಂಸ್ಥೆಯೊಂ ತರಬೇತಿಯನ್ನು ಆಯೋಜಿಸುವಾಗ ಸದರಿ ಸಂಸ್ಥೆಯಲ್ಲಿ ಆಹಾರ ಮತ್ತು ವಸತಿಯ ಸಮ ಕಂಡುಬಂದಿತ್ತು, ತದನಂತರ ತಕ್ಷಣವೇ ಇಲಾಖೆಯಿಂದ ಮಧ್ಯಸ್ಥಿಕೆಯನ್ನು ವಹಿಸಿ. ಸಮಸ್ಯೆಯ ಪರಿಹರಿಸಲಾಗಿರುತ್ತದೆ.<br>ತದನಂತರ ಯಾವುದೇ ವಸತಿ ತರಬೇತಿ ಕಾರ್ಯಕ್ರಮವನ್ನು ಪಡೆಯಲು ನಗರ ಸ್ಥಳೀ ಸಂಸ್ಥೆಗಳಿಂದ ಬೇಡಿಕೆ ಬಂದಿರುವುದಿಲ್ಲ. ಬಂದಲ್ಲಿ ಸದರಿ ಅಂಶವನ್ನು ಪರಿಗಣ ಅಳವಡಿಸಿಕೊಳ್ಳಲಾಗುವುದು. |
| 9 | ಲಘು ಮೋಟಾರು ವಾಹನ ಚಾಲನಾ ತರಬೇತಿ ಪಡೆದವರಿಗೆ ಹಳದಿ ಬಿಲ್ಲೆಯನ್ನು ಪಡೆಯಲು ಸುಧಾರಿತ ತರಬೇತಿ ಸಹ ಒಳಗೊಂಡಿರಬೇಕು. ಇದು ಹಳದಿ ಫಲಕದ ವಾಹನಗಳಲ್ಲಿ ಟ್ಯಾಕ್ಸಿ ಚಾಲಕರಾಗಿ ಉದ್ಯೋಗ ಪಡೆಯಲು ಅಭ್ಯರ್ಥಿಗಳಿಗೆ ಅನುಕೂಲವಾಗುತ್ತದೆ. | ಹಳದಿ ಬಿಲ್ಲೆಯನ್ನು ಪಡೆಯುವ ತರಬೇತಿ ವಿಷಯವು ಕೇಂದ್ರ ಸರ್ಕಾರದವರು ತಿಳಿಸಿರು ತರಬೇತಿ ವಿಷಯದ ಪಟ್ಟಿಯಲ್ಲಿ ಇರುವುದಿಲ್ಲ. ಆದಾಗ್ಯೂ, ತರಬೇತಿ ವಿಷಯವ ಅಳವಡಿಸಿಕೊಳ್ಳಲು, ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಅನುಮೋದನೆ ಪಡೆಯಲು ಕ್ರ ಕೈಗೊಳ್ಳಲಾಗುವುದು. |
| 10 | ತರಬೇತಿ ಪಡೆಯುವವನು ಸರಿಯಾದ ಸಮಯಕ್ಕೆ ಪ್ರಮಾಣಪತ್ರವನ್ನು ಪಡೆಯಲು ತರಬೇತಿ ಕಾರ್ಯಕ್ರಮದ ಕೊನೆಯ ದಿನದಂದು ಅಥವಾ ಕಾರ್ಯಕ್ರಮ ಮುಗಿಯುವ ಹಂತದಲ್ಲಿಯೇ ಮೂರನೇ ಪಕ್ಷದ ಮೌಲ್ಯಮಾಪನವನ್ನು ತೆಗೆದುಕೊಳ್ಳಬೇಕು. | ದಿನಾಂಕ:01.04.2019 ರಿಂದ ಪ್ರಾರಂಭವಾಗಿರುವ ಎಲ್ಲಾ ತರಬೇತಿ ಕಾರ್ಯಕ್ರಮಗಳಿ ಎನ್.ಎಸ್.ಡಿ.ಸಿ ಮಾನ್ಯತೆ ಹೊಂದಿರುವ ಸಂಸ್ಥೆಗಳಿಂದ ಪ್ರಮಾಣೀಕರಣ ಮ ಮೌಲ್ಯಮಾಪನವನ್ನು ಮಾಡುವ ಬಗ್ಗೆ ಕೇಂದ್ರೀಕೃತ (Centralized) ವಾಗಿಯೇ ಅಗತ್ಯ ಕ್ರಮವನ ಕೈಗೊಳ್ಳುವುದಾಗಿ ನಿರ್ದೇಶಕರು, ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಮಂತ್ರಾಲಯ ಭಾರತ ಸರ್ಕಾರ, ನವದೆಹಲಿ ರವರ ಪತ್ರ ಸಂ: K-13/8/2017-UPA (EFS:3145135 Dated:03.04.2019 ರಲ್ಲಿ ತಿಳಿಸಿರುವ ಮೇರೆಗೆ ಅದರಂತೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು. |

| | | |
|---|---|---|
| 11 | ಕೆಲವು ತರಬೇತಿ ಪಠ್ಯಕ್ರಮಗಳಾದ ಶುಶ್ರೂಷ ಸಹಾಯಕರು, ಆರೋಗ್ಯ ಕಾಳಜಿ ಸಂಬಂಧಿತ ವಿವಿಧೋದ್ದೇಶ ಕೆಲಸಗಾರರು ಮತ್ತು ಸೂಲಗಿತ್ತಿ ಸಹಾಯಕರನ್ನು ಖಾಸಗಿ ಆಸ್ಪತ್ರೆಗಳು ಮತ್ತು ಸರ್ಕಾರಿ ಸಂಸ್ಥೆಗಳು ಗುರುತಿಸಿರುವುದಿಲ್ಲ. ಪಠ್ಯಕ್ರಮದ ಅವಧಿಯು 6 ತಿಂಗಳುಗಳಿಗಿಂತಲೂ ಕಡಿಮೆ ಇರುವುದರಿಂದ ಮತ್ತು ಇಂಟರ್ನ್‌ಶಿಪ್ ಘಟಕವನ್ನು ಹೊಂದಿಲ್ಲವಾದ್ದರಿಂದ ಅದನ್ನು ಉದ್ಯಮವಾಗಿ ಗುರುತಿಸಿಲ್ಲ. ಇಂತಹ ಶಿಕ್ಷಣವನ್ನು ಉದ್ಯಮದ ಮಾನದಂಡಗಳಿಗೆ ತಕ್ಕಂತೆ ಮಾರ್ಪಡಿಸಬೇಕಾಗಿರುತ್ತದೆ. | • ತರಬೇತಿಯ ಅವಧಿಯು ಕೇಂದ್ರ ಸರ್ಕಾರದವರು ತಿಳಿಸಿರುವ ಮಾನದಂಡದ ಒಳಗೊಂಡಿರುತ್ತದೆ. ಹಾಗೂ ಡೇ-ನಲ್ಮ್ ಯೋಜನೆಯಡಿ ಕೇವಲ ಶಾರ್ಟ್ ಟರ್ಮ್ ತರಬೇತಿ ಕಾರ್ಯಕ್ರಮಗಳನ್ನು ಮಾತ್ರ ಅಳವಡಿಸಲಾಗುತ್ತಿದೆ.<br>• ಈ ಹಿಂದೆ Modular Employable Skills(MES) ನಡಿ ಶುಶ್ರೂಷ ಸಹಾಯಕರು, ಆರೋಗ್ಯ ಕಾಳಜಿ ಸಂಬಂಧಿತ ತರಬೇತಿಗಳು ಲಭ್ಯವಿದ್ದ ಕಾರಣ ಹಾಗೂ ನಗರ ಸ್ಥಳೀಯ ಸಂಸ್ಥೆಗಳಿಂದ ಬೇಡಿಕೆ ಇದ್ದ ಕಾರಣ ಸದರಿ ವಿಷಯಗಳಲ್ಲಿ ತರಬೇತಿಯನ್ನು ನೀಡಲಾಗಿರುತ್ತದೆ. ಹಾಗೂ ಪ್ರಸ್ತುತ ಸದರಿ ವಿಷಯಗಳಿಗೆ ಯಾವುದೇ ಬೇಡಿಕೆ ಬಂದಿರುವುದಿಲ್ಲ.<br>• ಪ್ರಸ್ತುತ ಕೇಂದ್ರ ಸರ್ಕಾರದವರು ತಿಳಿಸಿರುವ ಎನ್‌ಎಸ್‌ಕ್ಯೂಎಫ್ ನಲ್ಲಿ ಲಭ್ಯವಿರುವ 302 ತರಬೇತಿ ವಿಷಯಗಳ ಪೈಕಿ ಬೇಡಿಕೆ ಇರುವ ತರಬೇತಿ ವಿಷಯಗಳಿಗನುಗುಣವಾಗಿ ತರಬೇತಿಯನ್ನು ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಒಂದು ವೇಳೆ ಭವಿಷ್ಯತ್‌ನಲ್ಲಿ ಇಂತಹ ತರಬೇತಿ ವಿಷಯಗಳಿಗೆ ಬೇಡಿಕೆ ಬಂದಲ್ಲಿ ಆದ್ಯತೆಯನ್ನು ನೀಡಲಾಗುವುದಿಲ್ಲ. |
| 12 | ಪೌರಾಡಳಿತ ನಿರ್ದೇಶನಾಲಯದಲ್ಲೂ ಇದೇ ರೀತಿಯಲ್ಲಿರುವುದನ್ನು ಗಮನಿಸಲಾಗಿರುತ್ತದೆ. ಕರ್ನಾಟಕದ ಅನೇಕ ಇತರ ಇಲಾಖೆಗಳು ಸಹಾ ಯುವಕರಿಗೆ ಕೌಶಲ್ಯ ತರಬೇತಿಯನ್ನು ನೀಡುತ್ತವೆ. ಪ್ರಯತ್ನಗಳ ಪುನರಾವರ್ತನೆಗಳನ್ನು / ನಕಲುಗಳನ್ನು ತಪ್ಪಿಸಲು ಕೇಂದ್ರೀಕೃತ ಗಮನವನ್ನು ಹರಿಸಲು ಎಲ್ಲಾ ತರಬೇತಿ ಮತ್ತು ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಒಂದೇ ಸೂರಿನಡಿಯಲ್ಲಿ ತರಬಹುದಾಗಿದೆ. | ಸದರಿ ಅಂಶಕ್ಕೆ ಸಂಬಂಧಿಸಿದಂತೆ, ಈಗಾಗಲೇ ಸರ್ಕಾರವು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯವನ್ನು ಸೃಜಿಸಿದ್ದು, ಸದರಿ ಇಲಾಖೆಯಡಿಯೇ ಸರ್ಕಾರದ ವಿವಿಧ ಇಲಾಖೆಗಳ ಮೂಲಕ ನೀಡುತ್ತಿರುವ ತರಬೇತಿಗಳನ್ನು ಒಂದೇ ಸೂರಿನಡಿ ತರಲಾಗಿರುತ್ತದೆ ಹಾಗೂ ತರಬೇತಿಯನ್ನು ಪಡೆಯುವ ಎಲ್ಲಾ ಫಲಾನುಭವಿಗಳ ಆಧಾರ್ ಸಂಖ್ಯೆ ಹಾಗೂ ಫಲಾನುಭವಿಗಳ ಮೊಬೈಲ್ ಸಂಖ್ಯೆಗೆ ಬರುವ ಓ.ಟಿ.ಪಿ ಯನ್ನು ಡೇ-ನಲ್ಮ್ ಯೋಜನೆಯ ಎಂ.ಐ.ಎಸ್ ನಲ್ಲಿ ಮಾಹಿತಿಯನ್ನು ಕಾಲೋಚಿತಗೊಳಿಸುವುದು ಕಡ್ಡಾಯವಾಗಿರುತ್ತದೆ. |
| 13 | ಮಹಿಳಾ ಉದ್ಯಮಿಗಳಿಗೆ ಈ ಯೋಜನೆಯಡಿ, ಮಾರುಕಟ್ಟೆ ಬೆಂಬಲವನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮತ್ತು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಮಂತ್ರಾಲಯದ ಸಹಕಾರದೊಂದಿಗೆ ಮಹಿಳೆಯರಿಗಾಗಿ ಅನುಷ್ಠಾನಗೊಳಿಸುತ್ತಿರುವ ವಾಣಿಜ್ಯ ಸಂಬಂಧಿತ ಉದ್ಯಮಶೀಲತಾ ಸಹಾಯ ಮತ್ತು ಅಭಿವೃದ್ಧಿ ಯೋಜನೆಯಡಿ ವಿಸ್ತರಿಸಬಹುದಾಗಿರುತ್ತದೆ. | ವಿವಿಧ ಇಲಾಖೆಗಳೊಂದಿಗೆ ಸಮನ್ವಯವನ್ನು ಮಾಡಲು ಈಗಾಗಲೇ ಅಗತ್ಯ ಕ್ರಮವನ್ನು ಕೈಗೊಳ್ಳಲಾಗಿರುತ್ತದೆ. ಮುಖ್ಯವಾಗಿ, ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯ ಮುದ್ರಾ ಯೋಜನೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉದ್ಯೋಗಿನಿ ಯೋಜನೆ ಹಾಗೂ ಮುಂತಾದ ಕಾರ್ಯಕ್ರಮಗಳ ಜೊತೆಗೆ ಸಮನ್ವಯವನ್ನು ಮಾಡಲಾಗುತ್ತಿದೆ. |

ಅಭಿಯಾನ ನಿರ್ದೇಶಕರು (ಡೇ-ನಲ್ಮ್),
ಆಯುಕ್ತಾಲಯ, ಉದ್ಯಮಶೀಲತೆ ಮತ್ತು ಜೀವನೋಪಾಯ,
ಬೆಂಗಳೂರು.

NULM

ಕರ್ನಾಟಕ ಸರ್ಕಾರ

ಸಂಖ್ಯೆ:ಕೌಉಜೀಇ 16 ಉಜೀಇ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ, ಬೆಂಗಳೂರು
ದಿನಾಂಕ:29.06.2020.

ಇಂದ,

ಸರ್ಕಾರದ ಕಾರ್ಯದರ್ಶಿ,
ಕೌಶಲ್ಯಾಭಿವೃದ್ಧಿ , ಉದ್ಯಮಶೀಲತೆ
ಮತ್ತು ಜೀವನೋಪಾಯ ಇಲಾಖೆ,
ಬೆಂಗಳೂರು.

ಗೆ:

ಮುಖ್ಯ ಮೌಲ್ಯಮಾಪನಾಧಿಕಾರಿ,
ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ,
ಬೆಂಗಳೂರು

ಮಾನ್ಯರೇ,

**ವಿಷಯ:** ದಿ:10.04.2017 ರಂದು ನಡೆದ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಸಭೆಗೆ ಅನುಪಾಲನ ವರದಿಯನ್ನು ಸಲ್ಲಿಸುವ ಬಗ್ಗೆ.

**ಉಲ್ಲೇಖ:** ಪತ್ರ ಸಂ.ಕೆಇಎ/51/ಎಟಿಆರ್/ಕೌ.ತ.ಜೀ/2019 ದಿನಾಂಕ:14.05.2019, 25.05.2020 ಹಾಗೂ 20.05.2020.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರಗಳ ಕಡೆ ಗಮನ ಸೆಳೆಯಲಾಗಿದೆ. ಡೇ-ನಲ್ಮ್ ಅಭಿಯಾನದ ಕೌಶಲ್ಯ ತರಬೇತಿ ಮೂಲಕ ಉದ್ಯೋಗ ಮತ್ತು ಸ್ಥಳ ನಿಯುಕ್ತಿ ಉಪಘಟಕದಡಿ ಮೌಲ್ಯಮಾಪನ ವರದಿಯ ಶಿಫಾರಸ್ಸುಗಳಿಗೆ ಸಂಬಂಧಿಸಿದಂತೆ, ಇಲಾಖಾ ವತಿಯಿಂದ ಕೈಗೊಂಡಿರುವ ಕ್ರಮಗಳ ಕುರಿತು ಅನುಪಾಲನಾ ವರದಿಯನ್ನು ಈ ಪತ್ರದೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿ ಒದಗಿಸಲಾಗಿದೆ ಎಂದು ತಮಗೆ ತಿಳಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ನಿಮ್ಮ ನಂಬುಗೆಯ,

29/6/2020

(ರಂಗನಾಥ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ.

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ
ಸ್ವೀಕೃತಿ ಸಂಖ್ಯೆ 5941/8
ದಿನಾಂಕ 30/06/2020
ಕಡತ ಸಂಖ್ಯೆ 2010

## ಅನುಬಂಧ-1

| ಕ್ರ. ಸಂ | ಕೋರಿರುವ ಅಂಶ | ಸ್ಪಷ್ಟೀಕರಣ |
|---|---|---|
| 1 | ಮೃದು ಕೌಶಲ್ಯ ಅಂದರೆ ಮಾತನಾಡುವ ಶೈಲಿ, ಗಣಕಯಂತ್ರ ಉಪಯೋಗಿಸುವ ಬಗ್ಗೆ ವೃತ್ತಿಪರ ಮತ್ತು ಆರ್ಥಿಕ ವಿಷಯಗಳನ್ನು ಎಲ್ಲಾ ತರಬೇತಿಯಲ್ಲಿ ಅಳವಡಿಸುವುದು. | ಸದರಿ ಅಂಶಕ್ಕೆ ಸಂಬಂಧಿಸಿದಂತೆ, ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಮಂತ್ರಾಲಯ, ಭಾರತ ಸರ್ಕಾರ ನವದೆಹಲಿ ರವರು ಕೌಶಲ್ಯ ತರಬೇತಿ ಮೂಲಕ ಉದ್ಯೋಗ ಮತ್ತು ಸ್ಥಳ ನಿಯುಕ್ತಿ ಉಪಘಟಕವನ್ನು ಅನುಷ್ಠಾನಗೊಳಿಸಲು ಹೊರಡಿಸಿರುವ ಅನುಷ್ಠಾನ ಮಾರ್ಗಸೂಚಿಯ ಆದೇಶ ಸಂ: **F.No.K-11/12/2017-UPA-III (E-3146312) Dated: 18.07.2018** ರ ಕ್ರಮ ಸಂಖ್ಯೆ 2.3 ರಲ್ಲಿ ಈ ಕೆಳಕಂಡಂತೆ ತಿಳಿಸಲಾಗಿರುತ್ತದೆ.<br><br>**Soft Skills**<br>1. As mentioned in 2.2 (ii) above, soft skills (which would include computer literacy, language and workplace inter-personal skills relevant for the sector/trade) are integral part of the Qualifi cation Packs under NSQF.<br>2. Additionally inputs should also be given on fi nancial literacy (savings, credit, subsidy, remittance, insurance and pension) and entitlements of poor under other components of NULM and other Central/State schemes for social benefi ts and poverty alleviation.<br><br>ಮೇಲ್ಕಂಡ ಅಂಶಗಳಲ್ಲಿ ತಿಳಿಸಿರುವಂತೆ ಡೇ-ನಲ್ಮ್ ಅಭಿಯಾನದಡಿ ತರಬೇತಿಯನ್ನು ನೀಡುತ್ತಿರುವ ಫಲಾನುಭವಿಗಳಿಗೆ ಮಾತನಾಡುವ ಶೈಲಿ, ಗಣಕಯಂತ್ರ ಉಪಯೋಗಿಸುವ ಬಗ್ಗೆ ವೃತ್ತಿಪರ ಮತ್ತು ಆರ್ಥಿಕ ವಿಷಯಗಳನ್ನು ಎಲ್ಲಾ ತರಬೇತಿಯಲ್ಲಿ ಅಳವಡಿಸಿಕೊಳ್ಳಲಾಗಿದೆ |
| 2 | ನಗರ ಪ್ರದೇಶದ ಬಡವರ ಕುರಿತು ವ್ಯಾಖ್ಯೆ ನೀಡುವುದು | ಸರ್ಕಾರದ ಆದೇಶ ಸಂ: ಕೌಉಜೇಇ 82 ಉಜೇಇ ದಿ: 19.06.2019 ರಲ್ಲಿ ಡೇ-ನಲ್ಮ್ ಅಭಿಯಾನದ ಅನುಷ್ಠಾನಕ್ಕಾಗಿ ಫಲಾನುಭವಿಗಳನ್ನು ಗುರುತಿಸಲು ಆದಾಯ ಮಿತಿಯನ್ನು ರೂ.1.20 ಲಕ್ಷಗಳಿಗೆ ನಿಗದಿಪಡಿಸಿ ಆದೇಶಿಸಲಾಗಿದೆ. ಅದರಂತೆ ಸದರಿ ಆದಾಯದ ಮಿತಿಯನ್ನು ಹೊಂದಿರುವವರನ್ನು ನಗರ ಪ್ರದೇಶದ ಬಡವರೆಂದು ಗುರುತಿಸಿ ಯೋಜನೆಯಡಿ ದೊರೆಯುವ ಸೌಲಭ್ಯವನ್ನು ಕಲ್ಪಿಸಲಾಗುತ್ತಿರುತ್ತದೆ.<br><br>ಹಾಗೂ ಸರ್ಕಾರದ ಆದೇಶ ಸಂಖ್ಯೆ: ಕೌಉಜೇಇ 172 ಉಜೇಇ 2019 ದಿ: 19.10.2019 ರನ್ವಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯಡಿಯ PHH ಕುಟುಂಬಗಳ ವಿವರವನ್ನು ಪಡೆದುಕೊಂಡು ಸದರಿಯವರನ್ನು ನಗರದ ಬಡವರೆಂದು ಪರಿಗಣಿಸಿ ಯೋಜನೆಯಡಿ ದೊರೆಯುವ ಸೌಲಭ್ಯವನ್ನು ಕಲ್ಪಿಸಲಾಗುತ್ತಿರುತ್ತದೆ. |

<table>
<tr>
<td>3</td>
<td>ನರ್ಸಿಂಗ್ ಮತ್ತು ಆರೋಗ್ಯ ವಿಭಾಗದಲ್ಲಿ ನೀಡುತ್ತಿರುವ ತರಬೇತಿ ಪಡೆದವರನ್ನು ಖಾಸಗಿ ಆಸ್ಪತ್ರೆ ಮತ್ತು ಸರ್ಕಾರಿ ಸಂಸ್ಥೆಗಳಲ್ಲಿ ಮಾನ್ಯತೆ ಮಾಡುತ್ತಿರುವುದಿಲ್ಲ. ಇದಕ್ಕೆ ಕಾರಣ ತರಬೇತಿಯ ಅವಧಿಯು 6 ತಿಂಗಳಿಗಿಂತ ಕಡಿಮೆ ಇದ್ದು, ಇಂಟರ್ನ್‌ಶಿಪ್ ಇಲ್ಲದಿರುವುದು. ಈ ತರಬೇತಿಗಳನ್ನು ಅಗತ್ಯಕ್ಕೆ ಅನುಗುಣವಾಗಿ ಮಾರ್ಪಡಿಸಿ ಮಾನ್ಯತೆ ಬರುವಂತೆ ಪರಿಷ್ಕರಿಸುವುದು.</td>
<td>ಡೇ-ನಲ್ಮ್ ಅಭಿಯಾನವು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು ತರಬೇತಿಯ ವಿಷಯ ಮತ್ತು ತರಬೇತಿಯ ಅವಧಿಯು ಕೇಂದ್ರ ಸರ್ಕಾರದಿಂದ ನಿಗದಿಪಡಿಸಲ್ಪಟ್ಟಿರುತ್ತದೆ. ಅದರಂತೆ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿರುತ್ತದೆ.<br><br>ಪ್ರಸ್ತುತ ಅಭ್ಯರ್ಥಿಗಳಿಗೆ ಸಂಬಂಧಪಟ್ಟ ತರಬೇತಿ ವಿಷಯದ Sector Skill Council ಮೂಲಕ ಪ್ರಮಾಣೀಕರಣ ಮತ್ತು ಮೌಲ್ಯ ಮಾಪನವನ್ನು ಮಾಡಿ Sector Skill Council ಪ್ರಮಾಣ ಪತ್ರವನ್ನು ವಿತರಿಸುತ್ತಿದ್ದು, ಸದರಿ ಪ್ರಮಾಣ ಪತ್ರವು ಉದ್ಯೋಗವನ್ನು ಪಡೆಯಲು ಮೌಲ್ಯಯುತವಾಗಿರುತ್ತದೆ. ಆದಾಗ್ಯೂ, ಈ ಕುರಿತು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗುವುದು.</td>
</tr>
<tr>
<td>4</td>
<td>ತರಬೇತಿ ನೀಡುವ ಸಂಸ್ಥೆಗಳಿಗೆ ಹಣ ಪಾವತಿಸುವ ಮೊದಲು ಮೂರನೇ ವ್ಯಕ್ತಿಯಿಂದ ಈ ಕುರಿತು ಮೌಲ್ಯಮಾಪನಕ್ಕೆ ಒಳಪಡಿಸುವುದು.</td>
<td>ಡೇ-ನಲ್ಮ್ ಅಭಿಯಾನವು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ತರಬೇತಿ ಸಂಸ್ಥೆಗಳಿಗೆ ಅನುದಾನವನ್ನು ಬಿಡುಗಡೆ ಮಾಡುವ ಕ್ರಮದ ಬಗ್ಗೆ ಕೇಂದ್ರ ಸರ್ಕಾರವು ಕೌಶಲ್ಯ ತರಬೇತಿ ಮೂಲಕ ಉದ್ಯೋಗ ಮತ್ತು ಸ್ಥಳ ನಿಯುಕ್ತಿ ಉಪಘಟಕವನ್ನು ಅನುಷ್ಠಾನಗೊಳಿಸಲು ಹೊರಡಿಸಿರುವ ಅನುಷ್ಠಾನ ಮಾರ್ಗಸೂಚಿಯ ಆದೇಶ ಸಂ: F.No.K-11/12/2017-UPA-III (E-3146312) Dated: 18.07.2018 ರ ಕ್ರಮ ಸಂಖ್ಯೆ 3.A ರಲ್ಲಿ ಈ ಕೆಳಕಂಡಂತೆ ತಿಳಿಸಲಾಗಿರುತ್ತದೆ.<br><br><table><tr><th>Instalment and % of cost</th><th>Output parameter</th></tr><tr><td>1st instalment: 30%</td><td>On commencement of training batch against validated Candidates</td></tr><tr><td>2nd Instalment: 50%</td><td>On successful certifi cation of the trainees</td></tr><tr><td>3rd Instalment: 20</td><td>Based on outcome as described in 2A as per details given in 3A.ii</td></tr></table><br>ಅದರಂತೆ, ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಕ್ರಮವಹಿಸಲಾಗುತ್ತಿರುತ್ತದೆ.</td>
</tr>
<tr>
<td>5</td>
<td>ಕೌಶಲ್ಯ ತರಬೇತಿ ಪಡೆದವರಿಗೆ ಸೂಕ್ತ ಅವಕಾಶವನ್ನು ಕಲ್ಪಿಸಲು ಅವರ ವಿವರಗಳನ್ನು ಸಂಗ್ರಹಿಸಿ ದಾಖಲಿಸುವ ವ್ಯವಸ್ಥೆಯನ್ನು ನಿರ್ಮಿಸುವುದು.</td>
<td>ಸದರಿ ಅಂಶಕ್ಕೆ ಸಂಬಂಧಿಸಿದಂತೆ, ಕೇಂದ್ರ ಸರ್ಕಾರವು www.nulm.gov.in ವೆಬ್‌ಸೈಟ್‌ನ್ನು ಸೃಜಿಸಿದ್ದು, ಸದರಿ ವೆಬ್‌ಸೈಟ್‌ನಲ್ಲಿ ಫಲಾನುಭವಿಗಳ ಎಲ್ಲಾ ವಿವರಗಳನ್ನು ತರಬೇತಿ ವಿಷಯವಾರು ಕಾಲೋಚಿತಗೊಳಿಸುವುದು ಕಡ್ಡಾಯವಾಗಿರುತ್ತದೆ. ಅದರಂತೆ ದತ್ತಾಂಶವನ್ನು ಸಂಗ್ರಹಿಸುವ ವ್ಯವಸ್ಥೆಯನ್ನು ಮಾಡಲಾಗಿರುತ್ತದೆ.</td>
</tr>
</table>